**ಚಾಸಾಃ 17 ಫ್ರಾಸಾಃ 14**

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 1118/2019

| | |
|---|---|
| ಹೆಸರು | :ಹರ್ಷ |
| ತಂದೆಯ ಹೆಸರು | :ಕೃಷ್ಣಪ್ಪ ಗೌಡ |
| ಪ್ರಾಯ | :34 ವರ್ಷ |
| ಉದ್ಯೋಗ | :ಕೃಷಿ |
| ವಾಸ | :ಮರ್ಕಂಜ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 12.08.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನನಗೆ ಚಾಸಾ–18 ರವರ ಪರಿಚಯ ಇದೆ. 2018 ಫೆಬ್ರವರಿ ತಿಂಗಳಿನ ಸುದ್ದಿ ಬಿಡುಗಡೆ ಪತ್ರಿಕೆಯಲ್ಲಿ ಸರ್ಟಿಸಿಸ್ಕೋ ಏಜೆನ್ಸಿಯವರು ಮಲೇಶಿಯಾ ಸಿಂಗಪೂರ ದೇಶಗಳಲ್ಲಿ ಕೆಲಸ ಕೊಡಿಸುವುದಾಗಿ ಜಾಹೀರಾತು ನೀಡಿದ್ದು, ನಾನು ಆ ಬಗೆಗ ವಿಚಾರಿಸುವ ಸಲುವಾಗಿ ಮಾರ್ಚ್ ತಿಂಗಳಿನಲ್ಲಿ ಸುಳ್ಯ ಜ್ಯೋತಿ ಸರ್ಕಲ್ ನಲಿಲರುವ ಸರ್ಟಿಸಿಸ್ಕೋ ಏಜೆನ್ಸಿಯವರ ಕಚೇರಿಗೆ ನಾನು ಮತ್ತು ಚಾಸಾ18ರವರು ಹೋಗಿದ್ದು, ನಾವು ಹೋದ ಸಮಯದಲ್ಲಿ ಅಮರ್ ಜೀತ್ ಎಂಬ ವ್ಯಕ್ತಿ ಕಚೇರಿಯಲ್ಲಿದ್ದು, ನಮಗೆ ಮಲೇಶಿಯಾದ ಮಯಿದ್ದಿನ್ ಮಹಲ್ ನಲ್ಲಿ ಸ್ಟೋರ್ ಆಫೀಸರ್ ಕೆಲಸ ಕೊಡಿಸುವುದಾಗಿ ತಿಳಿಸಿದ್ದು, ಅದಕ್ಕಾಗಿ ಒಂದು ಲಕ್ಷ ಹಣವನ್ನು ನೀಡಬೇಕು ಮತ್ತು ಮುಂಗಡವಾಗಿ

ರೂ.50,000/- ಹಣ ಕೋಡಬೇಕು ಎಂದು ತಿಳಿಸಿರುತ್ತಾರೆ. ಕೆಲಸ ಸಿಕ್ಕಿದ ನಂತರ ತಿಂಗಳಿಗೆ ರೂ.10,000 ಗಳಂತೆ 5 ತಿಂಗಳುಗಳ ಕಾಲ ನೀಡಬೇಕು ಎಂದು ತಿಳಿಸಿರುತ್ತಾರೆ. ಅದರಂತೆ ದಿಃ 27.3.2018ರಂದು ನಾನು ಮತ್ತು ಚಾಸಾ18 ರವರು ಪಾಸ್ ಪೋರ್ಟ್ ಗಳನ್ನು ಮತ್ತು ತಲಾ ರೂ. 25,000 ಹಣವನ್ನು ಸದರಿ ವ್ಯಕ್ತಿಗೆ ನೀಡಿರುತ್ತೇವೆ. ಆ ಬಗ್ಗೆ ಅವರು ನಮಗೆ ರಶೀದಿಯನ್ನು ನೀಡಿರುತ್ತಾರೆ. ಸದರಿ ರಶೀದಿ ನಂಃ 315 ಆಗಿರುತ್ತದೆ. ನಂತರ ದಿಃ 1.5.2018ರಂದು ನಮಗೆ ಸದರಿ ಅಮರ್ ಜೀತ್ ಎಂಬ ವ್ಯಕ್ತಿ ಪಾಸ್ ಪೋರ್ಟ್ ಮತ್ತು ವಿಸಿಟಿಂಗ್ ವೀಸಾ ತೋರಿಸಿ ನನ್ನಿಂದ ರೂ.35,000/- ಹಣವನ್ನು ಪಡೆದುಕೂಾಂಡಿರುತ್ತಾರೆ. ಆ ರೀತಿ ಹಣ ಪಡೆದುಕೊಂಡ ಬಗ್ಗೆ ಈ ಹಿಂದೆ ನೀಡಿದ್ದ ರಶೀದಿಯಲ್ಲಿ ನಮೂದು ಮಾಡಿರುತ್ತಾರೆ. ನಮಗೆ ಜೂನ್ 10ನೇ ತಾರೀಖಿನ ಒಳಗೆ ಕೆಲಸ ಮಾಡಿಸಿಕೋಡಡುವುದಾಗಿ ತಿಳಿಸಿದ್ದರು. ನಾವು ಜೂನ್ 10 ರಂದು ಕಚೇರಿ ಬಳಿ ಹೋೀಗಿ ನೋಡುವಾಗ ಸದರಿ ಕಚೇರಿ ಕ್ಲೋಸ್ ಆಗಿತ್ತು, ನಾವು ಪೆುೀನ್ ಮಾಡಲಾಗಿ ಆತ ಫೋನ್ ಕರೆ ಸ್ವೀಕರಿಸಿರುವುದಿಲ್ಲ. ದಿಃ 21.6.2018ರಂದು ಆತ ವಂಚನೆ ಮಾಡಿರುವುದಾಗಿ ಸುಳ್ಯ ಪೊಲೀಸ್ ಠಾಣೆಯಲ್ಲಿ ಜನ ಸೇರಿರುವುದಾಗಿ ನಮಗೆ ತಿಳಿದು ಬಂದಿರುತ್ತದೆ.

ದಿಃ 13.2.2019ರಂದು ಪೋಲೀಸರು ನನ್ನನ್ನು ಪೊಲೀಸ್ ಕರೆಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಆ ಸಮಯದಲ್ಲಿ ನನ್ನ ಪಾಸ್ ಪೋರ್ಟನ್ನು ಪೊಲೀಸರಿಂದ ಪಡೆದುಕೊಂಡಿರುತ್ತೇನೆ. ಸದರಿ ಅಮರ್ ಜೀತ್ ಎಂಬ ವ್ಯಕ್ತಿಯನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಆತ ನಮಗೆ ಅಮರ್ ಜೀತ್ ಎಂದು ತನ್ನ ಹೆಸರನ್ನು ಸುಳ್ಳು ಹೇಳಿ ಅದೇ ಹೆಸರಿನ ಕಾರ್ಡನ್ನು ನಮಗೆ ತೋರಿಸಿರುತ್ತಾನೆ. ಆರೋಪಿ ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ನನ್ನಿಂದ ಒಟ್ಟು ರೂ.60,000/- ಪಡೆದುಕೊಂಡು ನಮಗೆ ವಂಚಿಸಿರುತ್ತಾನೆ. ಆರೋಪಿ ನಮಗೆ ನೀಡಿದ ರಶೀದಿ ಯನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ.

ಅದನ್ನು ನಿಪಿ-14 ಎಂದು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ</u>**

ಆರೋಪಿ ನಿಪಿ-14ನ್ನು ತನ್ನ ಕೈಯಲ್ಲೇ ಬರೆದಿರುತ್ತಾನೆ. ಅದರಲ್ಲಿ ದಿಃ 27.3.2018 ರಂದು ರೂ.25,000/- ಮತ್ತು ದಿಃ 1.8.2018 ರಂದು ರೂ.35,000/- ಎಂದು ನಮೂದು ಮಾಡಿರುತ್ತಾನೆ. ನಿಪಿ-14ರಲ್ಲಿ ಅಕ್ಷರಗಳಲ್ಲಿ ಇಪ್ಪತ್ತೈದು ಸಾವಿರ ಎಂದು ಮಾತ್ರ ಕಂಡು ಬರುತ್ತದೆ ಎಂದರೆ ಸರಿ. ರೂ.35,000/- ಎಂಬುದನ್ನು ನಾನು ಮತ್ತು ಪೊಲೀಸರು ಸೇರಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ರೂ.35,000/- ಪಡೆದುಕೊಂಡ ಬಗ್ಗೆ ಆರೋಪಿ ನಿಪಿ-14ರ ಮೇಲೆ ಸಹಿ ಹಾಕಿರುವುದಿಲ್ಲ. ಆ ಕಾರಣಕ್ಕೆ ನಿಪಿ-14ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಯಾವುದೇ ಖಾಸಗಿ ಸಂಸ್ಥೆಯ ಮೂಲಕ ಉದ್ಯೋಗಕ್ಕೆ ಸೇರುವಾಗ ಅವರ ಪೂರ್ವಾಪರ ವಿಚಾರಿಸುತ್ತೇವೆ ಎಂದರೆ ಸರಿ. ನಾನು ಆರೋಪಿತನ ಕಚೇರಿಗೆ ಹೋದಾಗ ಆರೋಪಿತನ ಪೂರ್ವಾಪರ ವಿಚಾರಿಸಿರುತ್ತೇನೆ ಮತ್ತು ಎಷ್ಟು ಜನರಿಗೆ ಕೆಲಸ ಕೊಡಿಸಿದ್ದಾರೆ ಎಂಬ ಬಗ್ಗೆ ವಿಚಾರಿಸಿರುತ್ತೇನೆ. ಕೆಲವು ಜನರಿಗೆ ಕೆಲಸ ಕೊಡಿಸಿರುವುದಾಗಿ ಆರೋಪಿ ತಿಳಿಸಿರುತ್ತಾನೆ. ವಾಸ್ತವವಾಗಿ ಮೊದಲು ಅರ್ಜಿ ನೀಡಿದವರಿಗೆ ಮೊದಲು ಕೆಲಸ ಕೊಡಿಸುತ್ತಾರೆ ಎಂದರೆ ಸರಿ. ವಿಸಾ ಮತ್ತು ಪ್ಲೈಟ್ ಟಿಕೆಟ್ ಕೊಡಿಸಲು ಖರ್ಚು ಇರುತ್ತದೆ ಎಂದರೆ ಸರಿ. ಅದನ್ನು ತಯಾರು ಮಾಡಲು ಮುಂಗಡವಾಗಿ ಹಣ ನೀಡಬೇಕು ಎಂದರೆ ಸರಿ. ಆರೋಪಿ ಚೆನ್ನೈ ಮೂಲದ ಬಾಲಾಜಿ ಏಜೆನ್ಸಿ ಕಡೆಯಿಂದ ವಿಸಾ ಮಾಡಿಸಿಕೊಡುತ್ತಾರೆ ಎಂದರೆ ನನಗೆ ಆ ಬಗ್ಗೆ ತಿಳಿಸಿರುವುದಿಲ್ಲ. ಆರೋಪಿ ಹೇಳಿದ ಷರತ್ತುಗಳನ್ನು ಒಪ್ಪಿದ ನಂತರ ನಾನು ಮುಂಗಡ ರೂ.25,000/- ಹಣ ನೀಡಿರುತ್ತೇನೆ ಎಂದರೆ ಸರಿ. ಅಷ್ಟು ಹಣ ಖರ್ಚಿಗೆ ಬೇಕಾಗಿರುತ್ತದೆ ಎಂದರೆ ಸರಿ.

ಆರೋಪಿ ಕೆಲಸ ಕೊಡಿಸುವುದಾಗಿ ನನ್ನಿಂದ ರೂ.60,000/- ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ವಿಸಾ ನೀಡುವಾಗ ನಿಗದಿತ ಸಮಯಕ್ಕೆ ಮಾತ್ರ ನೀಡುತ್ತಾರೆ ಎಂದರೆ ಸರಿ. ನನಗೆ ತೋರಿಸಿದ ವಿಸಿಟಿಂಗ್ ವಿಸಾಕ್ಕೆ 3 ತಿಂಗಳ ಕಾಲಾವಧಿ ಇತ್ತು ಎಂದರೆ ಸರಿ. ನನಗೆ ವಿಸಿಟಿಂಗ್ ವಿಸಾ ತೋರಿಸಿದಾಗ ನಾನು ವಿದೇಶಕ್ಕೆ ಹೋಗಲು ತಯಾರಿರಲಿಲ್ಲ ಎಂದರೆ ಸರಿಯಲ್ಲ. ವಿಸಿಟಿಂಗ್ ವಿಸಾದಲ್ಲಿ ಹೋದ ನಂತರ ಅಲ್ಲಿ ನಮ್ಮ ವಿದ್ಯಾಭ್ಯಾಸಕ್ಕೆ ತಕ್ಕಂತೆ ಕೆಲಸ ನೀಡುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಏಜೆನ್ಸಿಗಳ ಮೂಲಕ ಕೆಲಸವನ್ನು ನಿಗದಿ ಮಾಡಿದ ನಂತರ ವಿದೇಶಕ್ಕೆ ಕಳುಹಿಸುವ ಕ್ರಮ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ 2018 ಮೇನಲ್ಲಿ ಜಾಬ್ ಎಗ್ರಿಮೆಂಟನ್ನು ಈ-ಮೇಲ್ ಮೂಲಕ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ನನಗೆ ಮಲೇಶಿಯಾದ ಮಯ್ದೀನ್ ಮಹಲಿನಲ್ಲಿ ಕೆಲಸದ ಆಫರ್ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ತಪ್ಪಿನಿಂದ ವಿದೇಶಕ್ಕೆ ಹೋಗದೇ ಉಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಬಾಕಿ ಹಣವನ್ನು ಕೆಲಸ ಮುಗಿದ ನಂತರ ನೀಡಬೇಕು ಎಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಮಾತುಕತೆಯಂತೆ ಕೆಲಸ ಆಗದ ಕಾರಣ ನಾನು ಬಾಕಿ ರೂ.40,000/- ಹಣ ನೀಡಿಲ್ಲ ಎಂದರೆ ಸರಿ. ಆರೋಪಿ ನನಗೆ ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಹೆಸರು ಅಮರ್ ಜೀತ್ ಎಂಬ ಬಗ್ಗೆ ನನಗೆ ವಿಸಿಟಿಂಗ್ ಕಾರ್ಡ್ ತೋರಿಸಿದ್ದ ಆದರೆ ಅದನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ಆರೋಪಿತನ ವಿರುದ್ಧ ಚಾಸಾ-1ರವರು ಪೊಲೀಸರಿಗೆ ದೂರು ನೀಡಿದ್ದ ಕಾರಣಕ್ಕೆ ನಾನು ಆರೋಪಿತನ ಬಗ್ಗೆ ತಪ್ಪಾಗಿ ಭಾವಿಸಿ ಆರೋಪಿತನ ವಿರುದ್ಧ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1ರವರು ನನ್ನ ನಂತರದಲ್ಲಿ ಕೆಲಸಕ್ಕಾಗಿ ಆರೋಪಿತನ ಕಚೇರಿಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ವಂಚನೆ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ